ಬಳೆಗಳು ಝುಣಗುಟ್ಟು ಅವಳ ಕಲಾಕೃತಿಯ ಒಡಲಿಗೆ ನಾದವನ್ನೂ ಬೆರೆಸುತ್ತಿತ್ತು. ಪ್ರಸಾದ ಸೂರ್ಯೋದಯದ ಸೊಬಗಿನಲ್ಲಿ ಗಂಗೆಯ ಚಿತ್ರವನ್ನೇ ಕಾಣುತ್ತಿದ್ದಾಗ, ಅವನ ಚಿತ್ತವನ್ನು ಕಲಕಿತು ಈ ಕೂಗು.

'ಪ್ರಸಾದ...' ತಂದೆ ಶ್ರೀಧರ ಭಟ್ಟರು ಅಲ್ಲಿಗೇ ಬಂದು ನಿಂತುಬಿಟ್ಟಿದ್ದರು. ಪ್ರಸಾದನ ತಾಯಿ ಬಚ್ಚಲಮನೆಯಲ್ಲಿ ಜಾರಿ ಮೂಳೆ ಮುರಿದುಕೊಂಡದ್ದರ ನೆವವಾಗಿ ವ್ರಣದಿಂದ ಪ್ರಾಣ ಕಳೆದುಕೊಂಡಿದ್ದರು. ಅಂದಿನಿಂದ ಮಗನ ಮೇಲೆ ಆ ತಂದೆಗೆ ತೀವ್ರ ನಿಗಾ ಉಂಟಾಯಿತು. ಮನೆಯ ಪಕ್ಷಿ ಜೊತೆಯಲ್ಲಿ ಮಗನೂ ತನ್ನಿಂದ ಎಲ್ಲಿ ದೂರಾಗಿ ಬಿಡುತ್ತಾನೊ ಎಂಬುದರ ಭಯ ಅವರನ್ನಾವರಿಸಿತ್ತು.

'ಇದ್ಯಾಕೆ ಹೀಗೆ ಮೈ ಉರಿಸ್ತಿಯೋ ನೀನು...? ನಿನ್ನ ತಾಯಿ ಬದುಕಿ ಇದ್ದಿದ್ದರೆ, ನಿನ್ನ ಹೊಟ್ಟೆ, ನೆತ್ತಿ ನೋಡ್ಕೊಂಡು ಉಪಚಾರ ಮಾಡ್ತಿದ್ಳು... ಈಗ ಅವ್ಳು ಹೋದ್ಲು... ನಾನೊಬ್ಬ ನಿನ್ನನ್ನು ಹೇಗೆ ನೋಡ್ಲೊ...? ಎದ್ದ ಕೂಡಲೇ, ನೀನು ಎದ್ದಿದೀ ಏನೊ ಅಂತ ನಿನ್ನ ಹಾಸ್ಗೆ ಬಳಿ ಹೋದ್ರೆ ಅದು ಖಾಲಿ ಇತ್ತು... ಅದೆಷ್ಟು ದಿನ ಬೆಳಗಿನ ಜಾವಾನೇ ಇಲ್ಲದಿರುವ ನಿನಗಾಗಿ ಒದ್ದಾಡಲೊ?... ಯಾಕಪ್ಪಾ ಹೀಗೆ ಮಾಡ್ತೀಯ...? ನಡಿ, ಮನೆಗೆ ಹೋಗೋಣ...'

ತೀರಿ ಹೋದ ತಾಯ ನೆನಪು ಕಣ್ಣು ತುಂಬುವಂತೆ ನೀರು ಉಕ್ಕಿಬಂದಿತು. ಕೊನೆಯ ಉಸಿರು ಎಳೆಯುವಾಗಲೂ ಆಕೆಗೆ ತನ್ನ ಮಗನನ್ನು ಮುಂದಕ್ಕೆ ಗಮನಿಸುವವರ್‍ಯಾರು ಎಂಬ ಚಿಂತೆಯೇ ಇತ್ತು. ಮದುವೆಗೆ ಬಲವಂತ ಮಾಡುತ್ತಿದ್ದಳು. ಅದೆಷ್ಟೇ ಬಲವಂತ ಮಾಡಿದರೂ, ಎಷ್ಟೇ ಹೆಣ್ಣುಗಳನ್ನು ವರ್ಣಿಸಿದರೂ ಅವನು ಯಾವ ಹುಡುಗಿಯನ್ನೂ ನೋಡಲಿಲ್ಲ. ತನ್ನೊಳಗಿರುವ ಆತ್ಮ ವಂಚನೆ ಜೊತೆಗೆ ಇನ್ನೂ ಒಂದು ಜೀವಕ್ಕೆ ವಂಚನೆ ಮಾಡಲು ಅವನ ಮನಸ್ಸಾಕ್ಷಿ ಬಿಡಲಿಲ್ಲ.

ಈಗ ತಂದೆಯನ್ನು ನೋಡುತ್ತ 'ಅಪ್ಪಾ, ನೀವ್ಯಾಕೆ ಈಗ ಬಂದ್ರಿ?... ನಾನು ಹೊರಟೇ ಇದ್ದೆ... ನೀವು ಮನೆಗೆ ಹೋಗಿ... ನಾನು ಹಿಂದೆನೆ ಬರ್ತೀನಿ...' ಎಂದ.

'ಬೇಗ ಬಂದ್ಬಿಡಬೇಕು...'

'ಆಯ್ತಪ್ಪಾ...'

ಆ ವೃದ್ಧರು, ಕಲ್ಯಾಣ ಮಂಟಪದಲ್ಲಿ ಅವನನ್ನು ಹಾಗೆಯೇ ಬಿಟ್ಟು, ಹಿಂಬದಿ ಕಾಲು ಹಾದಿಯಲ್ಲಿ ಇಳಿದು ತಮ್ಮ ಮನೆ ಕಡೆ ನಡೆದರು.

ಅವರನ್ನು ಹಿಂದಕ್ಕೆ ಕಳುಹಿಸಿದ ನಿರಾಳತೆಯಲ್ಲಿ ಅವನು ಇದ್ದಾಗ, ದೂರದಿಂದ ಹತ್ತಿರಕ್ಕೆ ಮಗುವೊಂದರ ದನಿ ಕೇಳಿಬಂದಿತು. ಆ ದನಿ ಕೇಳಿ ಪ್ರಸಾದನಿಗೆ ತನ್ನ ಕರುಳ ಮೇಲೆ ತಣ್ಣಗಿನ ಹಾಲು ಹರಿದಂತೆ ಸುಖಾನುಭವವಾಯಿತು.

—ಅದು ಪಾಪೂಳ ದನಿ.

ದನಿ ಬಂದತ್ತ ಮುಖ ತಿರುಗಿಸಿ, 'ಪಾಪೂ... ಪಾಪಾ... ಬಾ...' ಪ್ರಸಾದ ಮೆದುವಾಗಿ ಕರೆದಾಗ ತಾಯಿ ಮಗಳು ಜೋಡಿಯಾಗಿ ಹೆಜ್ಜೆ ಇಡುತ್ತ ಬೇಗ ಬಂದರು.

ಇಂದ್ರಾ ಗಾಂಧಿ ಈಗ ಶಾಲಾ ಸಮವಸ್ತ್ರದಲ್ಲಿ ಶಿಸ್ತಾಗಿ ಕಂಡಳು.

'ಪಾಪೂ... ಸ್ಕೂಲಿಗೆ ಸೇರಿದ್ಯಾ...?' ಮುಖದ ತುಂಬಾ ಉತ್ಸಾಹದ ರಂಗವಲ್ಲಿ ಎಳೆದುಕೊಂಡು ಪ್ರಸಾದ ಕೇಳಿದ.

ಅದಕ್ಕೆ ಪ್ರತ್ಯುತ್ತರ ಗಂಗೆಯಿಂದ ಬಂದಿತು, 'ಹೂಂ ನ್ರೀ... ಈಕಿನ ಶಾಲೆಗೆ ಹಚ್ಚೀನ್ರಿ... ಸುನಂದ ಬಾಯಾರು ಈಕಿಗೆ ಶಾಲೆ ದಾಖಲು ಮಾಡಿ ಕೊಟ್ಟಾರ್ರಿ.'

'ಇಷ್ಟು ಬೆಳ್ಳಂ ಬೆಳಗೆ ಇವ್ಳನ್ನ ಸ್ಕೂಲಿಗೆ ಯಾಕೆ ಬಿಡ್ತೀಯ...?'

## ದೂರ

ಮುಪ್ಪಿನಲ್ಲಿ
ಎಲ್ಲರೂ
ದೂರವೇ
ನಿದ್ರೆಯೂ ಸೇರಿ!

★ ಓಂಕಾರಯ್ಯ ತವನಿಧಿ



ವಿಜಯ

'ಈಕಿ ಶಾಲೆ ಬಾಳ ದೂರ ಐತ್ರೀ... ಬಸ್ಸ್ ಹಿಡ್ದು ಹೋಗ ಬೇಕ್ರೀ... ಅದ್ಕೇ ನಾನು ಕರ್‍ಕೊಂಡ್ ದಿನ್ನಾ ಬಸ್ಸಿಗೆ ಬಿಟ್ ಬರ್‍ತೀನ್ರಿ... ಮೂರುವರೀಗೆ ಬಸ್ಸು ಈಕೀನ ಮತ್ತು ಕರ್‍ಕೊಂಡ್ ಬರ್‍ತೈತೆ... ಆಗ ನಾನು ಬಂದು ಕರ್‍ಕೋಬ್ಯಾಕು...'

ಶಾಲಾ ಖರ್ಚು, ಬಸ್ಸುಚಾರ್ಜು ಇದಕ್ಕೆಲ್ಲಾ ಏನು ಮಾಡುವಳೊ ಎಂದು ಆಲೋಚನೆ ಮಾಡತೊಡಗಿದ.

'ತುಂಬಾ ಖರ್ಚಿದೆ ಅಲ್ವಾ... ಹೇಗೆ ನಿಭಾಯಿಸ್ತೀಯ ಗಂಗಾ...?'

'ಚಿಂತಿಲ್ರಿ... ಮೇಡಂನೋರು ಅದಕ್ಕೂ ದಾರಿ ಕಾಣಸ್ಯಾರ... ಈಕೀನ ಬಸ್ಸಿನಾಗ ಕುಂಡರ್ಸಿ ಗುಡಿಗೆ ಹೋಗತೀನ್ರಿ... ಹತ್ತು ಗಂಟೆಗೆ ಅಲ್ಲಿನ ಕೆಲ್ಸ ಮುಗೀತದೆ... ಹೇಗೂ ಈಕಿ ಶಾಲೆಗೆ ಹೋದ ಮ್ಯಾಗೆ ನಾನು ಒಬ್ಬಾಕಿ ಯಾನು ಮಾಡೋದೈತೆ ಹೇಳ್ರೀ... ಅದಕ್ಕಾ... ಮೂರು ಗಂಟೆ ಬಸ್ ಬರೋತನ... ಯಾರ್‍ಯಾರ್‍ದೋ ಮನಿಕೆಲ್ಸ, ಅಡಿಗೀ ಕೆಲ್ಸ ಹಿಡಿದೇನ್ರಿ... ಆಫೀಸಿಗೆ ಗಂಡ– ಹೆಣತಿ ಹೋಗೊ ಮನೀಗ್ಳು... ಬೀಗದ ಕೈ ನೆರೆ ಮನೆಗೆ ಕೊಟ್ಟು ಹೋಗ್ತಾರೆ. ನಾನು ಇಸಿದುಕೊಂಡು, ಕೆಲ್ಸ ಮಾಡಿಟ್ಟು ಹೊರಡ್ತೀನಿ... ಸಂಜೆ ಪೊರಿನ ಕರ್‍ಕೊಂಡೇ ಗುಡಿಗೆ ಕೆಲ್ಸಕ್ಕೆ ಹೊಂಡ್ತೀನ್ರಿ... ಯಾನೂ ಅಡ್ಡಿ ಇಲ್ರೀ... ಕೂಸಿಗೆ ಚುಟ್ಟಿ ಇದ್ದಾಗ ಮನ್ಲಿ ಕೂತು ಕಸೂತಿ ಮಾಡ್ತೀನ್ರಿ...'

ಅವಳ ವೇಳಾಪಟ್ಟಿ, ಪ್ರಾಮಾಣಿಕ ಕರ್ತವ್ಯ ಪ್ರಜ್ಞೆ ಅವನಿಗೆ ಬೆರಗು ತಂದು ಕೊಟ್ಟಿದ್ದಲ್ಲದೆ, ಅವಳಂತೆ ತಾನೇಕೆ ಜೀವನ ಎದುರಿಸಲು ಸಾಧ್ಯವಾಗುತ್ತಿಲ್ಲ ಎಂದು ಕೀಳರಿಮೆಯಾಯಿತು. ಅವನು 'ಒಂದೈದು ನಿಮಿಷ ನನ್ನ ಜೊತೆ ನೀವಿಬ್ರೂ ಕೂತ್ಕೋತೀರಾ... ಸಮಯ ಇದೆಯಾ...?'

'ಬಸ್ಸು ಬರೊ ವ್ಯಾಳಿ ಆಯ್ತು... ಮತ್ತೊಮ್ಮೆ ಬೆಟ್ಟಿ ಆಗ್ತೀನ್ರಿ...' ನಿರಾಸೆ ಒಳಗಿಟ್ಟುಕೊಂಡು, ಹೂವಿನ ದಂಡೆಯಂತಿದ್ದ ಪಾಪುವನ್ನು ಬಳಿಗೆ ತಂದುಕೊಂಡು ಅವಳ ಕೈಯನ್ನು ತನ್ನ ಮೂಳೆ ಬಿಟ್ಟು ಕೊಂಡಿದ್ದ ಕರದಿಂದ ನೇವರಿಸಿದ. ಅವನಿಗೆ ಹೊಸ ಚೈತನ್ಯ ಬಂದಂತೆ ಅನಿಸಿತ್ತು. ಅವನಷ್ಟೇ ವಾತ್ಸಲ್ಯ ಅನುಭವಿಸಿದ ಮಗು,

'ಪ್ರಸಾದಪ್ಪಾ...' ಎಂದಿತು ಮೆಲ್ಲನೆ.

'ಏನು ಮಗೂ...'

'ನಾಳೆ ಇಲ್ಲಿಗೆ ಬರ್ತೀರೇನ್ರಿ...?' ಎಂದಿತು ಆಸೆಯಿಂದ.

'ಇಲ್ಲ ಪಾಪೂ... ನಾಳೆ ನಂಗೆ ಬೇರೆ ಕೆಲ್ಸ ಇದೆ... ಇನ್ನೂ ಒಂದು ದಿನ ಅನುಕೂಲವಾದಾಗ ನಾವು ಮೂರು ಜನ ಸೇರೋಣ... ಆಗ್ಲಾ?...'

'ಯಾಕೆ...?' ಎಂದಳು ನಿರಾಸೆಯಿಂದ.

ಪ್ರಸಾದ ಹೇಳಿದ, 'ಯಾಕೆ... ಬೇಸರವಾಯ್ತ ಪಾಪೂ?...'

'ಹೂಂ...' ಎನ್ನುತ್ತಾ ತಾಯ ಬಳಿ ಹೋಯಿತು. ಆ ವೇಳೆಗೆ ಸೂರ್ಯ ಚೆನ್ನಾಗಿ ಬೆಳಕು ಚೆಲ್ಲಿದ. ಮೋಡವಿಲ್ಲದ ಆಕಾಶದಲ್ಲಿ ಬೆಳಕಿನದ್ದೇ ರಾಜ್ಯಭಾರ. ಸುತ್ತಲ ಮನೆಗಳು, ಗಿಡಗಳು, ಕಲ್ಲು ಮಣ್ಣು ಎಲ್ಲ ಸ್ಪಷ್ಟವಾಗಿ ಕಾಣಬಂದಿತು. ಪಾಪು ಆಗ ಏನನ್ನೊ ಕಂಡು ಕೂಗಿದಳು.

'ಅಲ್ನೋಡಿ... ಯಾರು ಬರ್ತಿದಾರೆ...! ದೂರದಲ್ಲಿ ಶಿವಣ್ಣ ಬೇರೆಲ್ಲೊ ನೋಡುತ್ತಾ ನಡೆದು ಬರುತ್ತಿದ್ದ, ಮೆಲ್ಲನೆ... ಅವನನ್ನೇ ನೋಡಿ ಪ್ರಸಾದ ಗಂಗೆಗೆ ಹೇಳಿದ.

'ಗಂಗಾ... ಈ ಶಿವಣ್ಣ ನಿಮ್ಮ ಊರಿನ ಕಡೇವ್ನು... ವಿಚಿತ್ರ ಮನುಷ್ಯ... ಇರೋ ಊರು ಬಿಟ್ಟು ಇಲ್ಲಿಗ್ಯಾಕೆ ಒಂಟಿಯಾಗಿ ಬಂದಿದ್ದಾನೊ ಏನೊ...! ನನ್ನ ಆರೋಗ್ಯದ ಬಗ್ಗೆ ಅತಿಯಾಗಿ ಆಸ್ಥೆ ವಹಿಸಿದ್ದಾನೆ. ನನಗೆ ಔಷಧಿ ಕೊಡ್ತಿದಾನೆ. ನಂಗೇನೂ ಆಗಿಲ್ಲ ಅಂದ್ರೂ ಕೇಳಲ್ಲ. ಕೆಲವು ಸಲ ಅಧಿಕ ಪ್ರಸಂಗಿ ಆಗ್ತಾನೆ... ಅವ್ನು ಯಾರೂಂತ ನಿಂಗೆ ಗೊತ್ತಾ?'

ನಿಮ್ಮೂರ ಕಡೇವ್ನು, ನಿನ್ನ ಮಾತಾಡ್ಸಲು ಬರ್ತಾನಾ...?'

'ಇಲ್ಲ' ಎಂದು ಬಿಟ್ಟಳು ಗಂಗೆ.

ಶಿವಣ್ಣ ತನ್ನ ಗಂಡ ಎಂದು ಬಿಟ್ಟುಕೊಡಲೇ ಇಲ್ಲ ಅವಳು.

'ನಾನು ನಿನ್ನ ಗಂಡ ಅಂಬೋದು ಯಾರ ಕೂಟೆ ಹೇಳ್ಬ್ಯಾಡ' ಎಂದವನು ಭಾಷೆ ತೆಗೆದು ಕೊಂಡಿದ್ದನಲ್ಲ! ಅದರ ಎಚ್ಚರಿಕೆ ಸದಾ ಕಾಲ ಅವಳನ್ನು ಬೆದರಿಸುತ್ತಿತ್ತು.

ಇಂದ್ರಾ ಗಾಂಧಿ ಮಾತ್ರ ಉತ್ಸಾಹದಿಂದ ಹೇಳಿದಳು,

'ಪ್ರಸಾದಪ್ಪಾ... ನಂಗೆ ಅವ್ನು ಗೊತ್ತೈತಿ...'

ಪ್ರಸಾದ ಬಾಗಿ, ತನ್ನ ಕಿವಿಯನ್ನು ಅವಳ ಬಾಯಿ ಬಳಿ ತಂದು 'ನಂಗೆ ಗುಟ್ಟಾಗಿ ಹೇಳು... ಅಮ್ಮನಿಗೆ ಕೇಳದಂತೆ...' ಎಂದು ಮೋಜಿಗಾಗಿ ಆಟವಾಡಿ